- --                    ಅಸಲು ದಾವೆ ಸಂ**: 56/2024** ಪಿ.ಡಬ್ಲು **- 1**

**ದಿ: 12-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ವಾದಿ ಪರ ಶ್ರೀ ಮಲ್ಲಿಕಾರ್ಜುನ ವಕೀಲರಿಂದ :**

ಈ ದಾವೆಯಲ್ಲಿ ನಾನು ವಾದಿಯಾಗಿದ್ದು ಇಂದು ನನ್ನ ಮೌಖಿಕ ಸಾಕ್ಷದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತವೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಹಾಕಿರುತ್ತೇನೆ.

ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

1. ಖಾನಾಪುರ ಗ್ರಾಮದ ಜಮೀನಿನ ಸರ್ವೆ ನಂಬರ್ 82/*/ಅ, ಇದರ 13 ಕಂಪ್ಯೂಟರ್ ಪಹಣಿಗಳನ್ನು ಮತ್ತು ಒಂದು ಕಂಪ್ಯೂಟರ್ ಮುಟೇಶನ್ ನ್ನು ಕ್ರಮವಾಗಿ ನಿ ಪಿ 1 ರಿಂದ 14 ಎಂದು ಗುರುತಿಸಲಾಯಿತು.
2. ಖಾನಾಪುರ ಗ್ರಾಮದ ಜಮೀನಿನ ಸರ್ವೆ ನಂಬರ್ 81/*/ಅ, 81/*/4 ಇವುಗಳ 13 ಕಂಪ್ಯೂಟರ್ ಪಹಣಿಗಳನ್ನು ಮತ್ತು ಒಂದು ಕಂಪ್ಯೂಟರ್ ಮುಟೇಶನ್ ನ್ನು ಕ್ರಮವಾಗಿ ನಿ ಪಿ 15 ರಿಂದ 28 ಎಂದು ಗುರುತಿಸಲಾಯಿತು.
3. ಖಾನಾಪುರ ಗ್ರಾಮದ ಜಮೀನಿನ ಸರ್ವೆ ನಂಬರ್ 81/ಅ, ಇವುಗಳ 02 ಕೈಬರಹದ ಪಹಣಿಗಳನ್ನು ಕ್ರಮವಾಗಿ ನಿ ಪಿ 29 ಮತ್ತು 30 ಎಂದು ಗುರುತಿಸಲಾಯಿತು.
4. ಖಾನಾಪುರ ಗ್ರಾಮದ ಜಮೀನಿನ ಸರ್ವೆ ನಂಬರ್ 82/*/2 ಮತ್ತು 81/*/4 ಇವುಗಳ 02 ಕಂಪ್ಯೂಟರ್ ಪಹಣಿಗಳನ್ನು ಕ್ರಮವಾಗಿ ನಿ ಪಿ 31 ಮತ್ತು 32 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿಯರ ವಕೀಲರ ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ